2. 67.17 ಕಿ.ಮೀ. 11 ಕೆ.ವಿ. ಮಾರ್ಗದ ವಿಸ್ತರಣೆಯ ಗುರಿ ಪೈಕಿ, 4.1 ಕಿ.ಮೀ.ಗಳ ಕೆಲಸ ಮುಗಿದಿದ್ದು, 44.8 ಕಿ.ಮೀ.ಗಳ ಕೆಲಸ ಪ್ರಗತಿಯಲ್ಲಿದೆ.

3. 10.54 ಕಿ.ಮೀ. ಎಲ್.ಟಿ.ಮಾರ್ಗದ ವಿಸ್ತರಣೆಯ ಗುರಿಯ ಪೈಕಿ, 1.2. ಕಿ.ಮೀ ಗಳ ಕೆಲಸ ಪ್ರಗತಿಯಲ್ಲಿದೆ.

4) 4 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಲೈನಿನ ನಿರ್ಮಾಣದ ಗುರಿಯನ್ನು ಈಗಾಗಲೇ ಸಾಧಿಸಿದ್ದು, ಕೆಲಸ ಪೂರ್ಣಗೊಂಡಿದೆ.

5) 9.3 ಕಿ.ಮೀ. ಗಳ ಉದ್ದದ 11 ಕೆ.ವಿ. ಮಾರ್ಗದ ಪುನರ್ವಾಹಕಗೊಳಿಸುವ ಗುರಿ ಹೊಂದಿದ್ದು, 3 ಕಿ.ಮೀ.ಗಳ ಕೆಲಸ ಮುಗಿದಿದೆ.

ಮಂಡ್ಯ ನಗರದಲ್ಲಿ ವಾಣಿಜ್ಯ ಸಂಕೀರ್ಣಗಳು

10(34) - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣಗಳಿಗೆ ಅನುಮತಿ ನೀಡಬೇಕಾಗಿದ್ದಲ್ಲ ಪಾಲಿಸಬೇಕಾದ ನಿಯಮಗಳನ್ನು ಅನುಸರಿಸಲಾಗುತ್ತಾ ಇದೆಯೇ?

ಆ) ಹಾಗಿದ್ದಲ್ಲಿ, ಅದರ ವಿವರಗಳೇನು?

ಇ) 2001-02ನೇ ಸಾಲಿನಲ್ಲಿ ಒಟ್ಟು ಪರವಾನಿಗೆ ನೀಡಿದ ವಾಣಿಜ್ಯ ಸಂಕೀರ್ಣಗಳೆಷ್ಟು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ರಾಜ್ಯ ಸಚಿವರು)

ಅ) ಹೌದು.

ಆ) ವ್ಯಾಪಕಾಭಿವೃದ್ಧಿ ಯೋಜನೆ (ಸಿ.ಡಿ.ಪಿ) ಅಡಿಯಲ್ಲಿ ವಾಣಿಜ್ಯ ವಲಯದಲ್ಲಿ ಬರುವಂತಹ ಎಲ್ಲಾ ಜಮೀನಿನಲ್ಲಿ ವಾಣಿಜ್ಯ ಕಟ್ಟಡಗಳನ್ನು ಕಟ್ಟಲು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961 ರ ಕಲಂ (14) ಮತ್ತು (15)ರ ಪ್ರಕಾರ ಅನುಮತಿ ನೀಡಲಾಗುತ್ತಿದೆ.

ಇ) 6 ವಾಣಿಜ್ಯ ಸಂಕೀರ್ಣಗಳು

ಮಂಡ್ಯ ನಗರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ

11(36) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ನಗರದಲ್ಲಿನ ಕುಡಿಯುವ ನೀರಿನ ವ್ಯವಸ್ಥೆಯ ವಿತರಣಾ ಜಾಲವನ್ನು ಬಲಪಡಿಸಿ, ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳುವ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ?

2. ಹಾಗಿದ್ದಲ್ಲಿ ಈ ದಿಸೆಯಲ್ಲಿ ಈವರೆವಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

1. ಹೌದು.

2. ಮಂಡ್ಯ ನಗರದ ಹಳೆಯ ಮತ್ತು ಎಲ್ಲಾ ಹೊಸ ಬಡಾವಣೆಗಳನ್ನು ಒಳಗೊಂಡಂತೆ ಸಮಗ್ರವಾಗಿ ವಿತರಣಾ ಜಾಲ ಹಾಗೂ ಮೇಲ್ಮಟ್ಟದ ಜಲಸಂಗ್ರಹಾಗಾರಗಳನ್ನು ನಿರ್ಮಿಸಲು ಒಂದು ಸಮಗ್ರ ಯೋಜನೆಯನ್ನು ತಯಾರಿಸಲು ಕನ್ಸಲ್ಟೆಂಟಿಗೆ (ಸ್ಟುಪ್) ವಹಿಸಲಾಗಿದ್ದು, ಸರ್ವೆ ಕಾರ್ಯ ಹಾಗೂ ವಿನ್ಯಾಸ ಕಾರ್ಯ ಮುಗಿದಿದ್ದು, ಅಂದಾಜನ್ನು ತಯಾರಿಸಲಾಗುತ್ತಿದೆ.

ಮಂಡ್ಯ ನಗರದ 2ನೇ ಹಂತದ ಒಳಚರಂಡಿ ಯೋಜನೆ

12(40) - ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಮಂಡ್ಯ ನಗರಕ್ಕೆ 2ನೇ ಹಂತದ ಒಳಚರಂಡಿ ಯೋಜನೆಯು ಕಾಮಗಾರಿ ಮಂಜೂರಾಗಿದೆಯೇ?

2. ಹಾಗಿದ್ದಲ್ಲಿ ಅದರ ವಿವರಗಳೇನು?

3. ಈ ಕಾಮಗಾರಿಗಳನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು)

1. ಮಂಜೂರಾಗಿದೆ.

2. ಈ ಯೋಜನೆಯಲ್ಲಿ ಕೆಳಕಂಡ ಕಾಮಗಾರಿಗಳಿಗೆ ಅನುವು ಮಾಡಲಾಗಿದೆ.

1) ಆಳು ಗುಂಡಿಗಳ ನಿರ್ಮಾಣ

2) 3650 ಮೀ ಉದ್ದದ ಏರು ಕೊಳವೆ ಮಾರ್ಗ ಹಾಕುವುದು.

3) ನಾಲ್ಕು ಗ್ರಾಮಸಾರ ಸಂಗ್ರಹಣ ಬಾವಿಗಳ ನಿರ್ಮಾಣ.

4) 2000 ಮಿ.ಮೀ.ನಿಂದ 350 ಮಿ.ಮೀ ಒಳಗಿನ ವಿವಿಧ ವ್ಯಾಸದ ಗ್ರಾಮಸಾರ ಕೊಳವೆಗಳನ್ನು ಹಾಕುವುದು.

5. ಶುದ್ಧೀಕರಣಗಾರದ ನಿರ್ಮಾಣ

6. ಪಂಪುಗಳನ್ನು ಒದಗಿಸುವುದು ಹಾಗೂ ಅಳವಡಿಸುವುದು.

3. ಯೋಜನೆಯ ಶೇ. 25ರಷ್ಟು ಅಂದರೆ 357.42 ಲಕ್ಷಗಳನ್ನು ನಗರ ಸಭೆಯು ತನ್ನ ವಂತಿಕೆಯಾಗಿ ನೀಡಬೇಕಾಗಿದೆ. ಯೋಜನೆಯ ಪ್ರಾರಂಭಕ್ಕೆ ಮುಂಚೆ ತನ್ನ ಪಾಲಿನ ವಂತಿಕೆ ಕನಿಷ್ಟ 1/3 ಭಾಗವನ್ನು ಠೇವಣಿಗೆ ಇಡಬೇಕಾಗಿದೆ. ಆದರೆ ನಗರ ಸಭೆಯು ಠೇವಣಿ ಇಟ್ಟಿರುವುದಿಲ್ಲ. ಆದಾಗ್ಯೂ ಈ ಕಾಮಗಾರಿಗೆ ಟೆಂಡರ್ ಕರೆಯಲು ಮಂಡಲಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.